ಥರದಲ್ಲೂ ನನಗೆ ಅರ್ಹ... ಆದರೆ ನನ್ನ ಅಮ್ಮನ ವಿರುದ್ಧವಾಗಿ ನಾನು ಅವನೊಡನೆ ಮುಂದುವರೆಯಲಾರೆ...'

'ಅವನು ಇದಕ್ಕೆ ಒಪ್ಪಿದ್ದಾನಾ?'

'ಇಲ್ಲ... ಹಿ ಈಸ್ ಇಂಟೆನ್ಸ್ಲೀ ಇನ್ ಲವ್ ವಿತ್ ಮಿ... ಅದಕ್ಕೇ ಅವನನ್ನ ದಿನ ಬಿಟ್ಟು ದಿನ ಮೀಟ್ ಮಾಡುತೀನಿ... ಜಸ್ಟ್ ಲೈಕ್ ಎ ಫ್ರೆಂಡ್... ಒಳ್ಳೆಯ ಸ್ನೇಹಿತೆಯಾಗಿ ಇರುತೀನೀಂತ ತಿಳಿಹೇಳುತಿದೀನಿ... ಇದನ್ನ ನನ್ನ ಅಮ್ಮನಿಗೂ ಹೇಳಿದ್ದೀನಿ... ಅವಸರ ಬೇಡ ಅಂತ... ಆಗ್ನೇಯನಿಗೆ ಇನ್ನೊಂದು ಹುಡುಗಿ ಸಿಗೋವರೆಗೂ ನನಗೆ ಗಂಡು ನೋಡಬೇಡ ಅಂತ...'

'ವ್ವಾ... ವ್ವಾಟ್ಟ್?!' ಆರ್ಭಟಿಸಿಕೊಂಡು ಬಂದ ಆಶ್ಚರ್ಯವನ್ನು ತಡೆದು ಕೇಳಿದೆ. 'ಆರ್ ಯು ಸೀರಿಯಸ್ಸ್?!!'

'ಯೆಸ್, ಅಯಾಮ್ – ಸರ್–ಜೀ... ಆಗ್ನೇಯ ನನ್ನ ಸಲುವಾಗಿ ತನ್ನ ಬದುಕು ಹಾಳು ಮಾಡಿಕೊಳ್ಳೋದು ಬೇಡ... ಅವನಿಗೊಂದು ನೆಲೆ ಮಾಡಿಯೇ ನಾನು ಅವನ ಬದುಕನ್ನು ದಾಟೋದು...'

ವಿಚಿತ್ರವೆನಿಸಿತು. ಮನಸ್ಸು ಜೀಕಿ ಜೀಕಿ ತುಡಿಯಿತು.

ಈ ಹುಡುಗಿಗೆ ನಿಜಕ್ಕೂ ಪ್ರೀತಿಯ ಭಾಷೆ ಗೊತ್ತಿದೆಯೆ? ಇಲ್ಲಾ, ಇನ್ನೊಂದೇ ಭಾಷ್ಯ ಬರೆಯುತ್ತಿದ್ದಾಳೆಯೆ? ಅಥವಾ, ಹಿಂದೆಂದಿನಂತೆ ಒಳಗೊಂದು ಹೊರಗೊಂದು ಮಾಡುತ್ತಿದ್ದಾಳೆಯೆ? ಇರಾದೆಯೊಂದು, ಕಾಗುಣಿತವೊಂದು ಆಗುತ್ತಿದೆಯೆ? ಹೇಳಿಕೆಗೆ ತಕ್ಕ ಮಾತಿರದೆ, ಮಾತೊದಗದೆ ಸೋತಿದ್ದಾಳೆಯೆ? ಒಲಿದು ಬಂದ ಪ್ರೀತಿಯನ್ನು ಅವಣಿಸುವುದೇನು ಸುಲಭವೇ?

ಈ ಪರಿ ಹತ್ತೆಂಟು ಪ್ರಶ್ನೆಗಳ ನಡುವೆಯೇ ಕುಣಾಲಿಯನ್ನು ಬೀಳ್ಕೊಂಡಿದ್ದೆ.

ಮತ್ತೊಂದೆರಡು ಸಲ ಸಿಕ್ಕಾಗಲೂ ಇದೇ ಮಾತು. ತನ್ನ ಅಮ್ಮನಿಗೆ ಒಲ್ಲೆನಿಸಿದ್ದನ್ನೂ ತಾನೆಂದೂ ಮಾಡೆನೆನ್ನುವ ನಿರ್ಧಾರ!

ಈ ಬಗೆಯ ನಿರ್ಣಯಗಳೇ ಹೀಗೆ... ಅಂದುಕೊಂಡೆ. ಗರಗಸಕ್ಕೆ ಮೈಯೊಡ್ಡಿದ ಹಾಗೆ. ಹೀಗೆಳೆದರೂ ನೋವು... ಹಾಗೆಳೆದರೂ ನೋವು...

ಹೌದು, ಎರಡು ಪ್ರೀತಿಪಾತ್ರರ ನಡುನಿಂತಾಗ, ಅತ್ತ ವಾಲಿದರೆ ಇತ್ತ ನಷ್ಟ... ಇತ್ತ ಜಾರಿದರೆ ಅತ್ತ ಹಾನಿ... ಸಂದಿಗ್ಧವೆಂದರೆ ಇನ್ನೇನು ಇದ್ದೀತು? ಅಜೀಬು ತಾನೇ?!

## ಎರಡು:

### *(i)*

ಹಾಗಂತ, ಪ್ರೀತಿಯೇನು ಹೇಳಿ ಕೇಳಿ ಆಗುತ್ತದೆಯೆ? ಹೇಳಿ ಕೇಳಿ ಅಳಿಯುತ್ತದೆಯೆ? ಅಥವಾ, ಹೇಳಲಿಕ್ಕೆ ಕೇಳಲಿಕ್ಕೆ ಅದೇನು ಜ್ಯೋತಿಷಿಯೆದುರಿನ ಪ್ರಶ್ನೆಯೆ? ಗರ ಬೀಳುವವರೆಗೂ ಕುಲುಕಿ ಚೆಲ್ಲಬಹುದಾದ ಕವಡೆಯೆ? ಇಷ್ಟಾಗಿ, ಪ್ರೀತಿಯೆಂಬುದೇನು ನಿಜವಾಗಿ ಪ್ರೀತಿಯೇ? ಇಲ್ಲಾ, ಸುಖಾಸುಮ್ಮನೆ ಮೋಹವೇ? ಇಂದುಂಟಾಗಿ ಮುಂದೆ ಇಲ್ಲವಾಗಬಹುದಾದರೆ ಅದು ಇನ್ನೇನೋ ಇದ್ದೀತು... ಏನಿರಬಹುದು?

ಹ್ಲಾಂ... ಬಹುಶಃ ಮೋಸವೇ ಇದ್ದೀತು!

ಮೋಹ ಮತ್ತು ಮೋಸ... ಮೋಹ ಅಥವಾ ಮೋಸ... ಎರಡರಲ್ಲೇನೇ ಆದರೂ ಅದು ಅದೇ!